International Journal of Kannada Research
www.kannadajournal.com

ISSN: 2454–5813
IJSR 2016; 2(3): 142-144
© 2016 IJKS
www.kannadajournal.com
Received: 24-05-2016
Accepted: 25-06-2016

**Anitha H C**
PhD Research Scholar and Artist
Department of Visual Arts
Jain University, Bangalore,
Karnataka, India

**Dr. Soumya Manjunath Chavan**
Guide and HOD,
Department of Visual Arts Jain
University, Bangalore,
Karnataka, India

# ಅನುಗ್ರಹಮೂರ್ತಿ ರೂಪ ವೈಶಿಷ್ಟ್ಯದಲ್ಲಿ ಶಿವನ ಅಭಿವ್ಯಕ್ತಿ: ಮೈಸೂರು ಸಾಂಪ್ರದಾಯಿಕ ಚಿತ್ರಕಲ

**Anitha H C, Dr. Soumya Manjunath Chavan**

**ಸಾರಾಂಶ**
ದಕ್ಷಿಣ ಭಾರತದ ಸಾಂಪ್ರದಾಯಿಕ ಚಿತ್ರಕಲಾ ಶೈಲಿಗಳಲ್ಲಿ ಒಂದಾದ ಮೈಸೂರು ಶೈಲಿಯು ವಿಜಯನಗರದ ಚಿತ್ರಕಲಾ ಶೈಲಿಯ ಮುಂದುವರೆದ ಕಲಾಪರಂಪರೆಯಾಗಿದೆ. ವಿಜಯನಗರದ ಭಿತ್ತಿಚಿತ್ರಕಲಾ ಶೈಲಿಯ ಹಲವು ಅಂಶಗಳನ್ನು ಮೈಗೂಡಿಸಿಕೊಂಡು ಕಾಗದ ಮತ್ತು ಬಟ್ಟೆಗಳ ಮೇಲೆ ಚಿತ್ರಗಳನ್ನು ರಚನೆ ಮಾಡಿದ್ದಾರೆ. ಮೈಸೂರು ಸಾಂಪ್ರದಾಯಿಕ ಚಿತ್ರಕಲಾ ಶೈಲಿಯಲ್ಲಿ ಪ್ರಮುಖವಾಗಿ ಶೈವ ಮತ್ತು ವೈಷ್ಣವ ಪೌರಾಣಿಕ ಕಥೆಗಳನ್ನು ಮತ್ತು ಕಾರಣಾಗಮ ಶಾಸ್ತ್ರಗಳನ್ನು ಅನುಸರಿಸಿ ಕಲಾಕೃತಿಗಳ ರಚನೆ ಮಾಡಲಾಗಿದೆ. ಪ್ರಸ್ತುತ ಪ್ರಬಂಧದಲ್ಲಿ ಶ್ರೀತತ್ವನಿಧಿ ಎಂಬ ಗ್ರಂಥದಿಂದ ಶಿವನ ಸ್ವರೂಪವನ್ನು ಅಭಿವ್ಯಕ್ತಿಸಿರುವ ಶಿವನಿಧಿ ಭಾಗದಿಂದ ಅನುಗ್ರಹಮೂರ್ತಿ ರೂಪವೈಶಿಷ್ಟ್ಯವನ್ನು ವಿಶ್ಲೇಷಣೆಗಾಗಿ ಆಯ್ದುಕೊಳ್ಳಲಾಗಿದೆ. ಈ ಪ್ರಬಂಧದಲ್ಲಿ 'ಕಿರಾತಾರ್ಜುನೀಯಮೂರ್ತಿ', 'ಚಂಡೇಶಾನುಗ್ರಹಮೂರ್ತಿ', 'ಚಕ್ರದಾನಮೂರ್ತಿ', ಎಂಬ ಶಿವನ ಮೂರು ಅನುಗ್ರಹಮೂರ್ತಿ ರೂಪವೈಷ್ಟ್ಯಗಳಲ್ಲಿ ನಿರೂಪಣೆಯ ಶೈಲಿ ಮತ್ತು ಲಕ್ಷಣಗಳನ್ನು ವಿವರಿಸಲಾಗಿದೆ.

**ಪ್ರಮುಖ ಸೂಚಿಕೆ ಪದಗಳು:** ಶಿವ, ಸಾಂಪ್ರದಾಯಿಕ, ಚಿತ್ರಕಲೆ, ಸಂಹಾರಮೂರ್ತಿ, ಮೈಸೂರು, ನಿರೂಪಣೆ, ಪೌರಾಣಿಕ

ಶಿವನನ್ನು ಸಂಹಾರಮೂರ್ತಿ ರೂಪವೈಶಿಷ್ಟ್ಯದಲ್ಲಿ ಅಭಿವ್ಯಕ್ತಿಸಿರುವ ಮೈಸೂರು ಸಾಂಪ್ರದಾಯಿಕ ಶೈಲಿಯ ಕಲಾಕೃತಿಗಳನ್ನು ಮೊದಲ ಪ್ರಬಂಧದಲ್ಲಿ ವಿಶ್ಲೇಷಿಸಲಾಗಿದೆ. ಅನುಗ್ರಹಮೂರ್ತಿಯಾಗಿ ಚಿತ್ರಿಸಿರುವ ಕಲಾಕೃತಿಗಳನ್ನು ನಿರೂಪಣಾತ್ಮಕ ಅಂಶ ಮತ್ತು ರೂಪವೈಶಿಷ್ಟ್ಯಗಳನ್ನು ಈ ಪ್ರಬಂಧದಲ್ಲಿ ವಿವರಿಸಿದ್ದು, ಮೊದಲನೆಯದರ ಮುಂದುವರಿದ ಭಾಗವಾಗಿದೆ. ಶಿವನನ್ನು ಕಿರಾತಾರ್ಜುನೀಯಮೂರ್ತಿಯನ್ನು ಮಹಾಭಾರತದಲ್ಲಿ, ಚಂಡೇಶಾನುಗ್ರಹಮೂರ್ತಿಯನ್ನು ಅಂಶುಮದ್‌ಭೇದಾಗಮ ಮತ್ತು ಉತ್ತರಕಾಮಿಕಾಗಮದಲ್ಲಿ, ಚಕ್ರದಾನಮೂರ್ತಿಯನ್ನು ಉತ್ತರಕಾರಣಾಗಮದಲ್ಲಿ, ವಿಘ್ನೇಶ್ವರಾನುಗ್ರಹಮೂರ್ತಿ, ರಾವಣಾನುಗ್ರಹಮೂರ್ತಿ ಮತ್ತು ನಂದೀಶಾನುಗ್ರಹಮೂರ್ತಿ ಸ್ವರೂಪಗಳಲ್ಲಿ ಅನುಗ್ರಹಮೂರ್ತಿಯಾಗಿ ಶಿವಪುರಾಣಗಳಲ್ಲಿ ವರ್ಣಿಸಿದ್ದಾರೆ. ಅವುಗಳಲ್ಲಿ ಮೊದಲ ಮೂರು ಮೂರ್ತಿಗಳನ್ನು ಶಿವನಿಧಿಯಲ್ಲಿ ಕಲಾಕೃತಿಗಳ ರೂಪದಲ್ಲಿ ಅಭಿವ್ಯಕ್ತಿಸಲಾಗಿದ್ದು ಅವುಗಳ ನಿರೂಪಣಾತ್ಮಕ ಮತ್ತು ರೂಪವೈಶಿಷ್ಟ್ಯಗಳನ್ನು ಮುಂದಿನ ಭಾಗದಲ್ಲಿ ವಿವರಿಸಲಾಗಿದೆ. ಶಿವನ ಅನುಗ್ರಹಮೂರ್ತಿ ಸ್ವರೂಪವು ಶಿಲ್ಪ ಮತ್ತು ಚಿತ್ರ ಕಲಾವಿದರಲ್ಲಿ ಪ್ರಮುಖವಾದ ಕಥಾನಕವಾಗಿದ್ದು ಶೈವ ದೇವಾಲಯದ ಆವರಣಗಳಲ್ಲಿ ಶಿಲ್ಪ ಮತ್ತು ಚಿತ್ರ ಕಲಾಕೃತಿಗಳಲ್ಲಿ ರಚಿಸಿದ್ದಾರೆ.

**ಕಿರಾತಾರ್ಜುನೀಯಮೂರ್ತಿ:** ಇಂದ್ರನ ಉಪದೇಶದಿಂದ ಪ್ರೇರಿತನಾದ ಅರ್ಜುನನು ವನವಾಸದಲ್ಲಿದ್ದಾಗ; ಕೌರವರನ್ನು ಯುದ್ಧದಲ್ಲಿ ಜಯಿಸುವುದಕ್ಕಾಗಿ; ಪಾಶುಪತವೆಂಬ ಅಸ್ತ್ರವನ್ನು ಪಡೆಯಲು ಶಿವನನ್ನು ಕುರಿತು ಹಿಮಾಲಯ ಪರ್ವತದಲ್ಲಿ ತಪಸ್ಸಾನಾಚರಿಸುತ್ತಾನೆ. ಇದರ ಫಲವೆಂಬಂತೆ ಶಿವನು ಪ್ರಸನ್ನನಾಗಿ, ವರವನ್ನು ಅನುಗ್ರಹಿಸುವ ಮೊದಲು ಅರ್ಜುನನ್ನು ಪರೀಕ್ಷಿಸಬೇಕೆಂದು ಕೊಂಡು ಕಿರಾತನೆಂಬ ಬೇಟೆಗಾರನಾಗಿ ಅರ್ಜುನನತ್ತ ಬರುತ್ತಾನೆ. ಅದೇ ಸಮಯದಲ್ಲಿ ಒಬ್ಬ ಅಸುರನು ದೈತ್ಯ ಹಂದಿಯ

**Correspondence**
**Anitha H C**
PhD Research Scholar and Artist
Department of Visual Arts
Jain University, Bangalore,
Karnataka, India

ರೂಪದಲ್ಲಿ ಅರ್ಜುನನ ಕಡೆಗೆ ಬರುತ್ತಾನೆ. ಶಿವ ಮತ್ತು ಅರ್ಜುನರು ಏಕಕಾಲಕ್ಕೆ ಹಂದಿಯನ್ನು ಬಾಣದಿಂದ ಹೊಡೆದು ಕೊಲ್ಲುತ್ತಾರೆ. ಹಂದಿಯನ್ನು ಕೊಂದ ಇವರಿಬ್ಬರ ನಡುವೆ ಕಿತ್ತಾಟವು ಪ್ರಾರಂಭವಾಗಿ ಅರ್ಜುನನು ಪ್ರಜ್ಞೆ ತಪ್ಪುತ್ತಾನೆ. ಸ್ವಲ್ಪ ಸಮಯದ ನಂತರ ಎಚ್ಚರವಾದ ಅರ್ಜುನನಿಗೆ ಶಿವನ ನಿಜವಾದ ಸ್ವರೂಪವು ಸ್ಪಷ್ಟವಾಗುತ್ತದೆ. ಅರ್ಜುನನ ಧೈರ್ಯ ಮತ್ತು ಸಾಮರ್ಥ್ಯಯದ ಬಗೆಗೆ ಶಿವನಿಗೆ ಮನವರಿಕೆಯಾಗಿ ಪಾಶುಪತಾಸ್ತ್ರವನ್ನು ಅನುಗ್ರಹಿಸುತ್ತಾನೆ. ಶಿವನ ಈ ಸ್ವರೂಪವನ್ನು ಕಿರಾತಾರ್ಜುನೀಯಮೂರ್ತಿ ಎಂದು ಕರೆಯಲಾಗಿದೆ.

ಶಿವನಿಧಿಯಲ್ಲಿ ಕಿರಾತಾರ್ಜುನೀಯಮೂರ್ತಿ ಸ್ವರೂಪದಲ್ಲಿ ಶಿವನಿಗೆ ನಾಲ್ಕು ಕೈಗಳು, ಮೂರು ಕಣ್ಣಿನಿಂದ, ಜಟಾಧಾರಿಯಾಗಿ ಮತ್ತು ತಲೆಗೆ ಮುಕುಟದಿಂದ ಅಲಂಕರಿಸಿದ್ದಾರೆ. ಕೈಗಳಲ್ಲಿ ಬಿಲ್ಲು, ಬಾಣ, ಮತ್ತು ಕೊಡಲಿ ಮತ್ತು ಮೃಗವನ್ನು ಹಿಡಿದಿರುವಂತೆ ಚಿತ್ರಿಸಿದ್ದಾರೆ. ಪವಿತ್ರವಾದ ನೂಲಿನ್ನು ಧರಿಸಿ ಸಮಭಂಗಿಯಲ್ಲಿ ನಿಂತಿದ್ದು, ಎಡಪಕ್ಕದಲ್ಲಿ ಪಾರ್ವತಿ ಮತ್ತು ಬಲಪಕ್ಕದಲ್ಲಿ ಅರ್ಜುನನು ನಿಂತಿರುವಂತೆ ತೋರಿಸಲಾಗಿದೆ. ಅರ್ಜುನನು ಕೈಜೋಡಿಸಿಕೊಂಡು ನಿಂತಿದ್ದು, ಕೂದಲನ್ನು ಮೇಲೆತ್ತಿ
ಕಟ್ಟಿದ್ದಾನೆ. ಆಭರಣಗಳಿಂದ ಅಲಂಕರಿಸಿಕೊಂಡಿದ್ದು, ಭಕ್ತಿಯನ್ನು ತೋರ್ಪಡಿಸುವಂತೆ ಚಿತ್ರಿಸಿದ್ದಾರೆ.



**ಚಂಡೇಶಾನುಗ್ರಹಮೂರ್ತಿ:** ಚೋಳ ದೇಶದ, ಮನ್ನಿ ನದಿಯ ತೀರದಲ್ಲಿನ ಶೆಯನಲ್ಲೂರ್ ಎಂಬ ಹಳ್ಳಿಯಲ್ಲಿ ಯಜ್ಞದತ್ತ ಎಂಬ ಬ್ರಾಹ್ಮಣನಿಗೆ ವಿಚಾರಶರ್ಮಣ್ ಎಂಬ ಮಗನಿದ್ದನು. ಒಮ್ಮೆ ಶಾಲೆಗೆ ಹೋಗುವ ದಾರಿಯಲ್ಲಿ ಹಸುವನ್ನು ಕ್ರೂರವಾಗಿ ಹಿಂಸಿಸುತ್ತಿದ್ದುದನ್ನು ನೋಡಿದನು. ಇದರಿಂದ ನೊಂದು ಹಳ್ಳಿಯಲ್ಲಿನ ಎಲ್ಲಾ ಹಸುಗಳನ್ನು ಸ್ವತಃ ಕಾಯುವ ಕಾರ್ಯವನ್ನು ಒಪ್ಪಿಕೊಳ್ಳುತ್ತಾನೆ. ಅಂದಿನಿಂದ ಹಸುಗಳು ಸಂತೋಷದಿಂದ ಹೆಚ್ಚಿನ ಹಾಲನ್ನು ಕೊಡುತ್ತವೆ. ಹಾಗಾಗಿ ಹೆಚ್ಚಾದ ಹಾಲನ್ನು ಮರಳಿನಿಂದ ಮಾಡಿದ ಲಿಂಗಕ್ಕೆರೆದು ಶಿವನನ್ನು ಭಕ್ತಿಯಿಂದ ಪ್ರಾರ್ಥಿಸುತ್ತಿರುತ್ತಾನೆ. ವಿಚಾರಶರ್ಮಣ್‌ನ ಈ ಕಾರ್ಯವನ್ನು ನೋಡಿದ ಹಳ್ಳಿಯ ಜನರು ಅವನ ತಂದೆಗೆ ವರದಿಯೊಪ್ಪಿಸುತ್ತಾರೆ. ಆದ್ದರಿಂದ ಯಜ್ಞದತ್ತನು ಸ್ವತಃ ಪರೀಕ್ಷಿಸಲು ನದಿ ತೀರಕ್ಕೆ ಬರುತ್ತಾನೆ. ಭಕ್ತಿಯಿಂದ ಧ್ಯಾನದಲ್ಲಿದ್ದ ವಿಚಾರಶರ್ಮಣ್‌ನಿಗೆ ತಂದೆ ಬಂದಿರುವುದರ ಅರಿವಾಗುವುದಿಲ್ಲ. ಇದರಿಂದ ಕೋಪಗೊಂಡ ಯಜ್ಞದತ್ತನು ಲಿಂಗವನ್ನು ಕಾಲಿನಿಂದ ಹೊಡೆಯುತ್ತಾನೆ. ಈ ಕಾರ್ಯದಿಂದ ಎಚ್ಚರಗೊಂಡ ವಿಚಾರಶರ್ಮಣ್‌ನು ಪವಿತ್ರವಾದ ಪೂಜಾ ವಸ್ತುವಾದ ಲಿಂಗವನ್ನು ಹೊಡೆದ ತಂದೆಯ ಕಾಲನ್ನು ಕೊಡಲಿಯಿಂದ ಕತ್ತರಿಸುತ್ತಾನೆ. ಇದರಿಂದ ತಂದೆಯು ಕುಸಿದು ಬೀಳುತ್ತಾನೆ. ಶಿವನು ವಿಚಾರಶರ್ಮಣ್‌ನ ಭಕ್ತಿಯಿಂದ ಪ್ರಸನ್ನನಾಗಿ ಪಾರ್ವತಿಯೊಂದಿಗೆ ಪ್ರತ್ಯಕ್ಷನಾಗುತ್ತಾನೆ. ಚಂಡೇಶ ಎಂಬ ಹೆಸರಿನಿಂದ ವಿಚಾರಶರ್ಮಣ್‌ನನ್ನು ಅನುಗ್ರಹಿಸಿ ತನ್ನ ಗಣದ ಮುಖ್ಯಸ್ಥನಾಗಿ ನೇಮಿಸುತ್ತಾನೆ. ತನಗೆ ಸಲ್ಲುವ ಪೂಜೆ, ನೈವೇದ್ಯ ಮತ್ತು ಬಟ್ಟೆಗಳನ್ನು ಚಂಡೇಶ್ವರನಿಗೂ ನೀಡಬೇಕೆಂದು ಆಜ್ಞೆ ಮಾಡಿ ಚಂಡೇಶನ ತಲೆಗೆ ಹೂವಿನ ಹಾರವನ್ನು ತಾನೇ ಸುತ್ತುತ್ತಾನೆ. ಶಿವನ ಈ ಸ್ವರೂಪವನ್ನು ಚಂಡೇಶಾನುಗ್ರಹಮೂರ್ತಿ ಎಂದು ಕರೆಯಲಾಗಿದೆ.

ಚಂಡೇಶಾನುಗ್ರಹಮೂರ್ತಿಯಲ್ಲಿ ಶಿವನನ್ನು ಹಳದಿ ವರ್ಣದಲ್ಲಿ ಚಿತ್ರಿಸಿದ್ದು, ನಾಲ್ಕು ಕೈಗಳಲ್ಲಿ ಮೃಗ, ಉಳಿಹಿಡಿದಿದ್ದು, ಒಂದು ಕೈಯನ್ನು ವರಕೊಡುವ ರೀತಿಯಲ್ಲಿ ಮತ್ತು ಬಲಗೈಯನ್ನು ಚಂಡೇಶನ ತಲೆಯ ಮೇಲಿರುವಂತೆ ಚಿತ್ರಿಸಲಾಗಿದೆ. ಎಡಪಕ್ಕದ ತೊಡೆಯಮಾಲೆ ಪಾರ್ವತಿ ಆಸೀನಳಾಗಿದ್ದು, ಬಲಗೈಯಲ್ಲಿ ಕಮಲದ ಹೂವನ್ನು ಹಿಡಿದಿದ್ದಾಳೆ. ಶಿವನು ಎತ್ತರದ ಪೀಠದ ಮೇಲೆ ಕುಳಿತಿದ್ದು ಚಂಡೇಶನು ಕೆಳಗೆ ನಿಂತಿರುವಂತೆ ತೋರಿಸಿದೆ. ಶಿವನ ಜಟೆಯಲ್ಲಿ ಗಂಗೆ ಮತ್ತು ಚಂದ್ರರಿದ್ದು, ಮುಕುಟಧಾರಿಯಾಗಿದ್ದಾನೆ. ಹಿನ್ನೆಲೆಯಲ್ಲಿ ವಾಸ್ತು ಕಲೆಯ ಅಂಶಗಳಿಂದ ಕಲಾಕೃತಿಯನ್ನು ಪೂರ್ಣಗೊಳಿಸಿದ್ದಾರೆ. ಶಿವಪಾರ್ವತಿಯರು ಮತ್ತು ಚಂಡೇಶನು ಆಭರಣಗಳಿಂದ ಅಲಂಕೃತರಾಗಿದ್ದಾರೆ.



**ಚಕ್ರದಾನಮೂರ್ತಿ:** ವಿಷ್ಣುವಿಗೆ ಕೆಲವು ಅಸುರರನ್ನು ಸಂಹರಿಸಲು ಸಾಧ್ಯವಾಗದೇ ಇದ್ದಾಗ ಶಿವನ ಹತ್ತಿರವಿರುವ ಚಕ್ರವನ್ನು ಪಡೆಯಲು ಶಿವನ ಕುರಿತು ಪ್ರಾರ್ಥಿಸಲು ತೊಡಗುತ್ತಾನೆ. ದಿನವೂ ಸಾವಿರ ಕಮಲದ ಹೂವುಗಳನ್ನು ಅರ್ಪಿಸುವುದರ ಮೂಲಕ ಶಿವನನ್ನು ಪೂಜಿಸುತ್ತಿರುತ್ತಾನೆ. ಆದರೆ ಒಮ್ಮೆ ಪೂಜೆಯ ಕೊನೆಯಲ್ಲಿ ಒಂದು ಹೂವು ಕಡಿಮೆಯಾಗಿದ್ದುದರಿಂದ ವಿಷ್ಣು ತನ್ನ ಒಂದು ಕಣ್ಣನ್ನೇ ಕಿತ್ತು ಶಿವನ ಪಾದಗಳಿಗೆ ಅರ್ಪಿಸಿ ಪೂಜೆಯನ್ನು ಸಮಾಪ್ತಿಗೊಳಿಸುತ್ತಾನೆ. ಇದರ ಹಿಂದೆ ಶಿವನ ಕೈವಾಡವಿದ್ದು ವಿಷ್ಣುವಿನ ಭಕ್ತಿಯನ್ನು ಪರೀಕ್ಷಿಸುವ ಸಲುವಾಗಿ ಒಂದು ಹೂವನ್ನು ಕಡಿಮೆ ಮಾಡಿರುತ್ತಾನೆ. ವಿಷ್ಣುವಿನ ಕಣ್ಣನ್ನು ಕಮಲದ ಹೂವಿಗೆ ಹೋಲಿಸುವುದರಿಂದ ತನ್ನ ಕಣ್ಣನ್ನೇ ಹೂವಿಗೆ ಸಮವೆಂದುಕೊಂಡು ಶಿವನಿಗರ್ಪಿಸುತ್ತಾನೆ. ಇದರಿಂದ ಪ್ರಸನ್ನಗೊಂಡ ಶಿವನು ವಿಷ್ಣುವಿಗೆ ಚಕ್ರವನ್ನು ಅನುಗ್ರಹಿಸುತ್ತಾನೆ. ಈ ಸ್ವರೂಪವನ್ನು ಶಿವನ ಚಕ್ರದಾನಮೂರ್ತಿಯೆಂದು ಕರೆದಿದ್ದಾರೆ.

ಚಕ್ರದಾನಮೂರ್ತಿಯಲ್ಲಿ ಶಿವನನ್ನು ವಿಷ್ಣುವಿಗೆ ಚಕ್ರವನ್ನು ದಾನ ಮಾಡುತ್ತಿರುವಂತೆ, ವಿಷ್ಣು ಅದನ್ನು ಸ್ವೀಕರಿಸುವಂತೆಯೂ ಚಿತ್ರಿಸಲಾಗಿದೆ. ವಿಷ್ಣು ಶಿವನಿಗೆದುರಾಗಿ ಕೈಮುಗಿದುಕೊಂಡು ನಿಂತಿದ್ದು, ಕಣ್ಣುಗಳನ್ನು ಶಿವನ ಪಾದದಲ್ಲಿ ನೆಟ್ಟಿದ್ದಾನೆ. ಪದ್ಮಾಕ್ಷನೆಂಬ ಹೆಸರಿನಿಂದ ಗುರುತಿಸಿಕೊಳ್ಳುವ ವಿಷ್ಣು ಹಳದಿ ಬಣ್ಣದ ರೇಷ್ಮೆ ವಸ್ತ್ರವನ್ನು ಉಟ್ಟು, ಕೌಸ್ತುಭ ಎಂಬ ರತ್ನವನ್ನು ಧರಿಸಿದ್ದಾನೆ. ಶಿವನು

ಕೈಗಳಲ್ಲಿ ಉಳಿ, ಮೃಗವನ್ನು ಹಿಡಿದಿದ್ದಾನೆ. ಶಿವನ ಒಂದು ಮುಖದಲ್ಲಿ ಮೂರು ಕಣ್ಣುಗಳನ್ನು ಹೊಂದಿದ್ದಾನೆ. ತಲೆಯಲ್ಲಿ ಗಂಗೆ ಮತ್ತು ಚಂದ್ರರಿದ್ದು ಜಟಾಮುಕುಟದಿಂದ, ಮೈಮೇಲೆ ಆಭರಣಗಳಿಂದ ಅಲಂಕೃತಗೊಂಡಿದ್ದಾನೆ.



**ಉಪಸಂಹಾರ**

ಈ ಮೊದಲೇ ತಿಳಿಸಿದಂತೆ ಕಲಾಕೃತಿಗಳು ಒಂದೇ ದೃಶ್ಯದಲ್ಲಿ ಕಥೆಯ ಸಾರಾಂಶವನ್ನು ನಿರೂಪಿಸುವ ಸಾಮರ್ಥ್ಯ ಹೊಂದಿವೆ. ಕಥಾಪಾತ್ರವರ್ಗದ ಸುತ್ತಲೂ ಕಥೆಯನ್ನು ಹೆಣೆದಿರುವುದರಿಂದ ಇಲ್ಲಿ ಪಾತ್ರಗಳು ಪ್ರಮುಖ ಪಾತ್ರ ವಹಿಸಿವೆ. ಶಿವನು ಕಲಾಕೃತಿಗಳ ಕೇಂದ್ರ ಬಿಂದುವಾಗಿದ್ದು ಅವನ ಸುತ್ತಲೂ ಕಥೆಯನ್ನು ಸೃಷ್ಟಿಸಲಾಗಿದೆ. ಶೈವ ಧರ್ಮವನ್ನು ಈ ಕಲಾಕೃತಿಗಳ ಮೂಲಕ ಜನಸಾಮಾನ್ಯರಿಗೆ ತಿಳಿಸುವ ಮತ್ತು ಪ್ರಚಾರ ಮಾಡುವ ಉದ್ದೇಶವೂ ಕೂಡಾ ಇಲ್ಲಿದೆ. ಪೌರಾಣಿಕ ಕಥೆಗಳ ಮೂಲ ಉದ್ದೇಶವು ಜನಸಾಮಾನ್ಯರನ್ನೂ ಮೋಕ್ಷದತ್ತ ಕೊಂಡ್ಯೊಯುವ ಮಹತ್ವದ ಕೆಲಸವೂ ಕೂಡಾ ಈ ಕಲಾಕೃತಿಗಳ ರಚನೆಯಲ್ಲಿ ಕಂಡುಬರುತ್ತದೆ. ಕಲಾಕೃತಿಗಳ ರಚನೆಯು ದೇವಾಲಯದ ಆವರಣಗಳಲ್ಲಿ ಮಾಡಿದ್ದು, ದಿನನಿತ್ಯವೂ ಜನರು, ಭಕ್ತರು ಭೇಟಿ ನೀಡುವ ಸ್ಥಳವಾಗಿರುವುದಲ್ಲದೆ, ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಮತ್ತು ಆರ್ಥಿಕ ಚಟುವಟಿಕೆಗಳ ಕೇಂದ್ರವಾಗಿರುವುದರ ಅನುಕೂಲವನ್ನು ಪಡೆದು ಶೈವ ಧರ್ಮವನ್ನು ಪ್ರಚಾರ ಮಾಡುವ ಕಾರ್ಯವನ್ನು ಜೊತೆಗೆ ಕೈಗೊಂಡರು. ಈ ಹಿನ್ನೆಲೆಯಲ್ಲಿ ಕಲಾಕೃತಿಗಳನ್ನು ಅಧ್ಯಯನ ಮಾಡಿದಾಗ ಅದರ ನಿರೂಪಣಾತ್ಮಕ ಅಂಶಗಳು ಸ್ಪಷ್ಟವಾಗುತ್ತವೆ. ಅಲ್ಲದೆ ಪುರಾಣಗಳು ಭಕ್ತಿಮಾರ್ಗವನ್ನು ತಿಳಿಸುವುದರಿಂದ, ಶಿವನನ್ನೇ ಪ್ರಧಾನವಾಗಿ ಆರಾಧಿಸಲು ಮತ್ತು ಶೈವ ಧರ್ಮವನ್ನು ಅನುಸರಿಸಲು ಈ ಕಲಾಕೃತಿಗಳು ಜನಸಾಮಾನ್ಯರಿಗೆ ದಾರಿದೀಪವಾಗಿವೆಯೆಂದು ತಿಳಿಯಬಹುದು.

ಮೈಸೂರು ಸಾಂಪ್ರದಾಯಿಕ ಶೈಲಿಯಲ್ಲಿರುವ ಕಲಾಕೃತಿಗಳು ಆ ಶೈಲಿಯ ತಾಂತ್ರಿಕ ಅಂಶಗಳನ್ನು ಹೊಂದಿರುವುದಲ್ಲದೆ, ನಿರೂಪಣಾತ್ಮಕ ಶೈಲಿಗೆ ಉತ್ತಮ ಉದಾಹರಣೆಗಳಾಗಿವೆ. ಕಲಾಕೃತಿಗಳಲ್ಲಿನ ಸಾಂಕೇತಿಕ ಅಂಶಗಳನ್ನು ವರ್ಣಗಳು, ಮತ್ತು ಹಿನ್ನೆಲೆಯಲ್ಲಿ ಚಿತ್ರಿಸಿರುವ ವಾಸ್ತು ಕಲೆಯ ಅಂಶಗಳೆಂದು ಗುರುತಿಸಬಹುದು. ವರ್ಣಗಳು, ಆಯುಧಗಳು, ಮತ್ತು ಸಂಯೋಜನಾ ಅಂಶಗಳನ್ನು ಪಾತ್ರದ ಕಾರ್ಯಕ್ಕನುಗುಣವಾಗಿ ಚಿತ್ರಿಸಿರುವುದು ಇಲ್ಲಿ ಪ್ರಮುಖವಾಗಿ ಕಾಣಬಹುದು. ಪೌರಾಣಿಕ ಕಥೆಗಳು ನಡೆದ ಸಂದರ್ಭಗಳು ಹೊರಾಂಗಣವನ್ನು ಸೂಚಿಸಿದರೆ ಕಲಾಕೃತಿಗಳು ಒಳಾಂಗಣವನ್ನು ತೋರಿಸುತ್ತಿವೆ. ಈ ಅಂಶಗಳು ಕಲಾಕೃತಿಯನ್ನು ಚಿತ್ರಿಸಿದ ಕಲಾವಿದನ ಕ್ರಿಯಾಶಕ್ತಿಯನ್ನು ಆಧಾರಿಸಿದಂತೆ ರಚನೆಯಾಗಿರುವುದನ್ನು ಗಮನಿಸಲಾಗಿದೆ. ಇಲ್ಲಿ ಕಥಾವಸ್ತು ಮತ್ತು ಪಾತ್ರಗಳು ಪ್ರಮುಖ ಪಾತ್ರ ವಹಿಸುವುದರಿಂದ ಉಳಿದ ಅಂಶಗಳು ಅವುಗಳನ್ನು ಸಮರ್ಥಿಸುವ ಕೆಲಸ ಮಾಡುತ್ತವೆ.

**ಆಧಾರಗ್ರಂಥಗಳು**


೧. ಮುಮ್ಮಡಿ ಕೃಷ್ಣರಾಜ ಒಡೆಯರ್. ಶ್ರೀತತ್ವನಿಧಿ. ಸಂಪುಟ – ೩. ಶಿವನಿಧಿ. ಸಂ, ರಮೇಶ್ ಕೆ ವಿ. ಪ್ರಾಚ್ಯವಿದ್ಯಾ ಸಂಶೋಧನಾಲಯ. ಮೈಸೂರು. ೨೦೦೪.

೨. ವೇಲಣಕರ್, ಕೀರ್ತನಾಚಾರ್ಯ ಲಕ್ಷ್ಮಣದಾಸ. (ಕನ್ನಡ ಅನುವಾದಕರು). ಪೊದ್ದಾರ್, ಹನುಮಾನ್ ಪ್ರಸಾದ (ಹಿಂದೀ ಸಂಪಾದಕರು). ಶಿವಪುರಾಣ. ಗೀತಾಪ್ರೆಸ್. ಗೋರಖಪುರ. ೨೦೧೨.

೩. ಸಂ, ಶಾಸ್ತ್ರಿ, ಜೆ ಎಲ್. ಏನ್ಸಿಯಂಟ್ ಇಂಡಿಯನ್ ಟ್ರಡಿಷನ್ ಆಂಡ್ ಮೈಥಾಲಜಿ. ಸಂಪುಟ ೧.೨,೩,೪,೫, ಮೋತಿಲಾಲ್ ಬನಾರಸಿದಾಸ್. ದೆಹಲಿ. ೧೯೭೦. ಪುನರ್ ಮುದ್ರಣ. .೨೦೦೯.

೪. ರಾವ್, ಗೋಪಿನಾಥ್ ಟಿ ಎ. ಎಲಿಮೆಂಟ್ಸ್ ಆಫ್ ಐಕೊನೊಗ್ರಫಿ. ಸಂಪುಟ– ೨. ಭಾಗ ೧. ಲಾ ಪ್ರಿಂಟಿಂಗ್ ಹೌಸ್. ಮದ್ರಾಸ್. ೧೯೧೬.

೫. ದೆಹೇಜಿಯ, ವಿದ್ಯಾ. ಡಿಸ್ಕೋರ್ಸ್ ಇನ್ ಅರ್ಲಿ ಬುದ್ಧಿಸ್ಟ್ ಆರ್ಟ್. ಮುನ್ಶಿರಾಮ್ ಮನೋಹರ್‌ಲಾಲ್. ನ್ಯೂ ದೆಹಲಿ. ೧೯೭೭.